ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ

ಸಿ.ಸಿ. 23/2025

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.01**

**ದಿನಾಂಕಃ** 23.07.2025 **ಸಿಡಬ್ಲ್ಯೂ.01**

| | |
|---|---|
| ಹೆಸರು | ಉಜ್ವಲ ಗೌಡ |
| ತಂದೆ ಹೆಸರು | ಶ್ರೀಕಾಂತ |
| ವಯಸ್ಸು | 22 ವರ್ಷ |
| ಉದ್ಯೋಗ | ಫೈನಾನ್ಸ ಕೆಲಸ |
| ವಾಸ ಸ್ಥಳ | ಬೆಂಗಳೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.2 ಮತ್ತು 3 ರವರ ಪರಿಚಯವಿದೆ. ಚಾಸಾ.4 ನನ್ನ ತಾಯಿ. ಚಾಸಾ.5 ನನ್ನ ಅಕ್ಕ. ಚಾಸಾ.6 ನನ್ನ ತಂಗಿ. 2024 ರಲ್ಲಿ ಸಂಜೆ 4.45 ಗಂಟೆಗೆ ನಾನು, ನನ್ನ ಅಕ್ಕ, ತಂಗಿ ಅಮ್ಮ ರವರು ನಮ್ಮ ಮನೆದೇವರಿಗೆ ಹೋಗಿ ನಮ್ಮ ಶಿಫ್ಟ್ ಕಾರ ನಂ.ಕೆಎ/02 ಎಂ ಕೆ 7702 ನೇದ್ದರಲ್ಲಿ ಹೋಗಿ ಮರಳಿ ಬೆಂಗಳೂರಿಗೆ ಹೋಗುತ್ತಿರುವಾಗ ರಾಣೆಬೆನ್ನೂರು ಟೋಲ್ ದಾಟಿದ ನಂತರ ಸೇತುವೆ ಮೇಲೆ ಒಂದು ಕೆ ಎಸ್ ಆರ್ ಟಿಸಿ ಬಸ್ ಅತಿವೇಗ ಮತ್ತು ಅಜಾಗರೂಕತೆಯಿಂದ ಹಿಂದಿನಿಂದ ಬಂದು ನಮ್ಮ ಕಾರಿಗೆ ಡಿಕ್ಕಿ ಪಡಿಸಿದ ಪರಿಣಾಮ ಅಪಘಾತ ಸಂಬವಿಸಿರುತ್ತದೆ. ಸದರಿ ಅಪಘಾತದಲ್ಲಿ ನನ್ನ ತಾಯಿಗೆ ಕೈ ತೆರಚಿ ಬೆನ್ನಿಗೆ ಪೆಟ್ಟಾಗಿರುತ್ತದೆ. ಚಾಸಾ.5 ಮತ್ತು 6 ನನ್ನ ತಂಗಿಗೆ ತಲೆಗೆ ಮತ್ತು ಮೈಕೈಗೆ ಏಟು ಬಿದ್ದು ಪ್ರಜ್ಞೆ ತಪ್ಪಿತ್ತು. ಚಾಸಾ.5 ರವರಿಗೆ ಎಡಗೈ ಸ್ವಾದೀನದಲ್ಲಿ ಇಲ್ಲ. ನಾನು ಕಾರನ್ನು ಸೈಡಿಗೆ ನಿಲ್ಲಿಸಿ ಬಸ್ ನ ಛಾಯ ಚಿತ್ರವನ್ನು ತೆಗೆದುಕೊಂಡಿರುತ್ತೇನೆ. ನನ್ನ ತಾಯಿ, ಅಕ್ಕ ತಂಗಿಯರನ್ನು ಆಂಬುಲೆನ್ಸನಲ್ಲಿ ಸಿಟಿ ಸೆಂಟ್ರಲ್ ಆಸ್ಪತ್ರೆಗೆ ಕಳುಹಿಸಿಕೊಟ್ಟೆನು. ಅದೇ ದಿನ ಸಂಜೆ 8.00 ಗಂಟೆಗೆ ಹರಿಹರ ಗ್ರಾಮಾಂತರ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಬಸ್ ನ ಚಾಲಕ ಹೆಸರನ್ನು ವಿಚಾರಿಸಲಾಗಿ ಚಾಲಕನ ಹೆಸರು ಕಲ್ಮೇಶ ಹಾಗೂ ನಿರ್ವಾಹಕನ ಹೆಸರು ಆನಂದ್ ಎಂದು ತಿಳಿದಿರುತ್ತದೆ. ಸಾಕ್ಷಿಯು ಗುರುತಿಸಿದ ದೂರನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1 (ಎ) ಎಂದು ಗುರುತಿಸಲಾಯಿತು. ಅಪಘಾತ ಪಡಿಸಿದ ಬಸ ನಂ. ಕೆಎ/27 0877. ದೂರು ನೀಡಿದ ಮಾರನೇ ದಿನ ಬೆಳಿಗ್ಗೆ ಸ್ಥಳಕ್ಕೆ ಬೇಟಿ ನೀಡಿ ಪೊಲೀಸರು ನನ್ನ ಚಾಸಾ.2 ಮತ್ತು 3 ರವರ ಸಮಕ್ಷಮ ತನಿಖೆ ಮಾಡಿರುತ್ತಾರೆ. ಸದರಿ ತನಿಖೆಯನು ಬೆಳಿಗ್ಗೆ 9.00 ರಿಂದ 9.45 ರವರೆಗೆ ಮಾಡಿರುತ್ತಾರೆ. ಸದರಿ ಸ್ಥಳದಲ್ಲಿ ಪಂಚನಾಮೆ ಜರುಗಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಪಂಚನಾಮೆಯನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2 (ಎ) ಎಂದು ಗುರುತಿಸಲಾಯಿತು. ಸದರಿ ಕಾಲಕ್ಕೆ ಕಚ್ಚಾ ನಕಾಶೆ ಹಾಗೂ ಛಾಯ ಚಿತ್ರ ತೆಗೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಕಚ್ಚಾ ನಕಾಶೆ ಯನ್ನು ನಿಪಿ.3 ಎಂದು ಸಾಕ್ಷಿಯ ಸಹಿಯನ್ನು ನಿಪಿ.3 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು

ಗುರುತಿಸಿದ ಛಾಯ ಚಿತ್ರವನ್ನು ನಿಪಿ. 4 ಎಂದು ಗುರುತಿಸಲಾಯಿತು. ಅದೇ ದಿನ ಸುಮಾರು 11 ಗಂಟೆಗೆ ಗ್ರಾಮಾಂತರ ಠಾಣೆಗೆ ವಾಹನಗಳನ್ನು ನಿಲ್ಲಿಸಿ ತನಿಖೆ ಮಾಡಿ ಛಾಯ ಚಿತ್ರ ತೆಗೆದಿರುತ್ತಾರೆ. ಸದರಿ ಸಂದರ್ಭದಲ್ಲಿ ನಾನು ಚಾಸಾ.2 ಮತ್ತು 3 ಹಾಗೂ ಪೊಲೀಸರು ಇದ್ದೆವು. ಸಾಕ್ಷಿಯು ಗುರುತಿಸಿದ ಪಂಚನಾಮೆಯನ್ನು ನಿಪಿ.5 ಎಂದು ಸಾಕ್ಷಿಯ ಸಹಿಯನ್ನು ನಿಪಿ.5 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಛಾಯ ಚಿತ್ರವನ್ನು ನಿಪಿ. 6 ರಿಂದ 9 ಎಂದು ಗುರುತಿಸಲಾಯಿತು. ಈ ದಿನ ಸದರಿ ಬಸ್ ಚಾಲಕ ನ್ಯಾಯಾದಲ್ಲಿ ಇದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಎಸ್ ಪಿ ಪರ ಎ ವಿ ಎಂ ವಕೀಲರಿಂದಃ**

ನಾವು ಪ್ರಯಾಣಿಸುತ್ತಿದ್ದ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಸದರಿ ಹೆದ್ದಾರಿಯಲ್ಲಿ 3 ವಾಹನಗಳು ಏಕಕಾಲಕೆಕ ಸರಾಗವಾಗಿ ಹೋಗಬಹದು ಎಂದರೆ ಸರಿ. ಸೇತುವೆ ಬಳಿ ಟುವೇ ರಸ್ತೆ ಇದೆ ಎಂದರೆ ಸರಿ. ಸಾಮಾನ್ಯವಾಗಿ ಎಲ್ಲಾ ಸೇತುವೆಗೂ ಹಾಗೂ ರಸ್ತೆಗೂ ಕೂಡುವ ರಸ್ತೆಯಲ್ಲಿ ಸ್ವಲ್ಪ ಬಿರುಕು ಇರುತ್ತದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ವಾಹನಗಳು ಜಂಪ್ ಆಗುತ್ತವೆ ಎಂದರೆ ಸರಿ. ಬಾರೀ ವಾಹನಗಳ ಸಂಚಾರದಿಂದ ಅಂತಹ ಬಿರುಕುಗಳು ಒಂದೊಂದು ಬಾರಿ ದೊಡ್ಡದಾಗಿ ರಸ್ತೆ ಹದಗೆಟ್ಟಿರುತ್ತವೆ ಎಂದರೆ ಸರಿ. ಅಂತಹ ರಸ್ತೆಗಳಲ್ಲಿ ಸಣ್ಣ ಕಾರುಗಳು ಜಂಪ ಆಗುವ ಪ್ರಮಾಣ ಜಾಸ್ತಿ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಾಹನ ಸಂಚಾರ ಹೆಚ್ಚು ಎಂದರೆ ಸರಿ. ನಿಪಿ.4 ರಲ್ಲಿ ತಗ್ಗು ಕಾಣುತ್ತಿದೆ ಎಂದರೆ ಸರಿ. ಹೆದ್ದಾರಿಯಿಂದ ಟುವೇ ರಸ್ತೆಗೆ ವಾಹನಗಳು ಬಂದಾಗ ವಾಹನ ದಟ್ಟಣೆ ಹೆಚ್ಚಾಗುತ್ತದೆ ಎಂದರೆ ಸರಿ. ಅದೇ ರೀತಿ ತಗ್ಗುಗು ಇದ್ದ ಸಂದರ್ಭದಲ್ಲಿ ವಾಹನ ದಟ್ಟಣೆ ಜಾಸ್ತಿ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಪೂರ್ವದಲ್ಲಿ ರಸ್ತೆ ಕಿರುದಾಗಿ ಇದೆ ಎಂದು ಯಾವುದೇ ಸೂಚನಾ ಫಲಕ ಇಲ್ಲ ಎಂದರೆ ಸರಿ. ಹಾಗಾಗಿ ಹೆದ್ದಾರಿ ಯಲ್ಲಿ ಬಂದ ವೇಗದಲ್ಲಿ ವಾಹನಗಳು ನಿಪಿ.4 ರಲ್ಲಿ ಕಾಣುತ್ತಿರುವ ರಸ್ತೆಯಲ್ಲಿ ಬರುತ್ತವೆ ಎಂದರೆ ಸರಿ. ಸದರಿ ದಿನ ನಮ್ಮ ಕಾರಿನ ಮುಂದೆ ಒಂದು ಕಾರು ಇತ್ತು. ಸದರಿ ಕಾರಿನ ಚಾಲಕ ನಿಪಿ.4 ರಲ್ಲಿ ಕಾಣುವ ರಸ್ತೆಯಲ್ಲಿ ತಮ್ಮ ಕಾರಿನ ವೇಗವನ್ನು ಕಡಿಮೆ ಮಾಡಿದರು ಎಂದರೆ ಸರಿ. ಸದರಿ ಕಾರಿನ ಚಾಲಕ ನನಗೆ ಯಾವುದೇ ಸೂಚನೆ ನೀಡಲಿಲ್ಲ ಎಂದರೆ ಸರಿ. ಸದರಿ ಕಾರಿನ ಚಾಲಕ ಏಕಾಏಕಿ ವೇಗವನ್ನು ಕಡಿಮೆ ಮಾಡಿದ್ದರಿಂದ ನಾನು ನನ್ನ ಕಾರಿನ ವೇಗ ಕಡಿಮೆ ಮಾಡಿದೆ ಎಂದರೆ ಸರಿ. ಸದರಿ ಸಂದರ್ಭದಲ್ಲಿ ನಾನು ಸಹ ಯಾವುದೇ ಸೂಚನೆ ನೀಡಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಬಲ ಇಂಡಿಕೇಟರ್ ಹಾಕಿದ್ದೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನಿಪಿ.1 ರಲ್ಲಿ ಹೇಳಿ ಬರೆಸಲು ತೊಂದರೆ ಇರಲಿಲ್ಲ ಎಂದರೆ ಸರಿ. ನಿಪಿ.1 ನ್ನು ಪೊಲಿಸರು ಬೆರಳಚ್ಚು ಪಡಿಸಿರುತ್ತಾರೆ. ಸದರಿಯವರು ಬೆರಳಚ್ಚು ಪಡಿಸಿದ ನಂತರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸ್ಥಳದಲ್ಲಿ ನನ್ನ ತಂಗಿ ಮತ್ತು ಅಕ್ಕರವರಿಗೆ ಪ್ರಜ್ಞೆ ತಪ್ಪಿತ್ತು ಎಂದು ನಿಪಿ.1 ರಲ್ಲಿ ಹೇಳಿ ಬರೆಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಅದೇ ರೀತಿ ನನ್ನ ತಾಯಿ ಬೆನ್ನಿಗೆ ನೋವಾಯಿತು ಹೇಳಿ ಬರೆಸಲು ತೊಂದರೆ ಇರಲಿಲ್ಲ ಎಂದರೆ ಸರಿ. ನಮ್ಮ ಮುಂದೆ ಚಲಿಸುತ್ತಿದ್ದ ಕಾರಿನ ನಂಬರ್ ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ ಆಂಬುಲೆನ್ಸ ನಂಬರ್ ಸಹ ನನಗೆ ಹೇಳಲು ಬರುವುದಿಲ್ಲ. ಚಾಸಾ.4 ರಿಂದ 6 ರವನ್ನು ಆಂಬುಲೆನ್ಸ ನಲ್ಲಿ ಕಳುಹಿಸಿದ ವಿಚಾರವನ್ನು ದೂರಿನಲ್ಲಿ ಹೇಳಿ

ಬರೆಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಸಿಟಿ ಸೆಂಟ್ರಲ್ ಆಸ್ಪತ್ರೆಯಲ್ಲಿ ನನ್ನ ತಾಯಿ ಚಿಕಿತ್ಸೆ ಪಡೆದಿದ್ದಾರೆ. ನಾನು ಚಿಕಿತ್ಸೆ ಪಡೆದಿಲ್ಲ. ಆಸ್ಪತ್ರೆಯಲ್ಲಿ ಚಾಸಾ.4 ರಿಂದ 6 ರವರ ಹೇಳಿಕೆ ಪಡೆದ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ವಿಚಾರವಾಗಿ ನಾನು ಆಸ್ಪತ್ರೆಗೆ ಹೋಗಿ ಚಾಸಾ.4 ರಿಂದ 6 ರವರನ್ನು ಕೇಳಿ ತಿಳಿದುಕೊಂಡಿಲ್ಲ. ಚಾಸಾ.4 ರಿಂದ 6 ರವರು ಆಸ್ಪತ್ರೆಗೆ ದಾಖಲಾದ ವಿಚಾರವನ್ನು ಪೊಲೀಸರಿಗೆ ತಿಳಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ನಿಪಿ.2 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ತಿಳಿದಿಲ್ಲ. ಬಸ್ ಚಾಲಕನ ಬ್ಯಾಚ ನಂಬರ್ ನನಗೆ ತಿಳಿದಿಲ್ಲ. ಸ್ಥಳಕ್ಕೆ ಬೇಟಿ ನೀಡಿದ ಪೊಲೀಸರ ಹೆಸರು ಪದನಾಮೆ ನನಗೆ ಗೊತ್ತಿಲ್ಲ. ನಿಪಿ.2 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ನಿಪಿ.5 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ನಿಪಿ.3 ಕ್ಕೆ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ನಿಪಿ.3 ಘಟನಾ ಸ್ಥಳಕ್ಕೆ ಅನುಗುಣವಾಗಿ ಇಲ್ಲ ಎಂದರೆ ಗೊತ್ತಿಲ್ಲ. ಘಟನೆ ದಿಃ 09.11.2024 ರಂದು ಆಗಿರುತ್ತದೆ. ನನ್ನ ಮುಂದಿದ್ದ ಕಾರಿನ ಚಾಲಕ ಮತ್ತು ನನ್ನ ನಿರ್ಲಕ್ಷ್ಯತನದಿಂದ ಈ ಅಪಘಾತ ಸಂಬವಿಸಿರುತ್ತದೆ ಆರೋಪಿ ತಪ್ಪಿನಿಂದ ಅಲ್ಲ ಎಂದರೆ ಸರಿಯಲ್ಲ. ನಾನು ನನ್ನ ಕಾರನ್ನು ಮುಂದಿನ ಕಾರಿಗೆ ತಗುಲಬಾರದು ಎಂದು ಜಿಗ್ ಜಾಗ್ ಆಕಾರದಲ್ಲಿ ಬಂದಿದ್ದರಿಂದ ಕಾರು ಬಸ್ ಗೆ ಡಿಕ್ಕಿಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಪರಿಹಾರ ಧನ ಕೋರಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಪರಿಹಾರ ಧನ ಪಡೆಯಲು ಅನುಕೂಲವಾಗಲಿ ಎಂದು ಆರೋಪಿ ವಿರುದ್ಧ ಸುಳ್ಳು ದೂರು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ